**ಕರ್ನಾಟಕ ಸರ್ಕಾರ**
**ಸಹಕಾರ ಚುನಾವಣಾ ಆಯೋಗ**

**ಸಂಖ್ಯೆ:**ಸಚುಆ/46/ಚುನಾವಣೆ/ಅ.ಸೂ/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 7-3-2014

## <u>ಸುತ್ತೋಲೆ</u>

**ವಿಷಯ:** ಲೋಕಸಭಾ ಚುನಾವಣಾ ದಿನಾಂಕ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ದಿನಾಂಕ:31-3-2014ಕ್ಕೆ ಅವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳು, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಕುರಿತು

**ಉಲ್ಲೇಖ:** ಸಹಕಾರ ಚುನಾವಣಾ ಆಯೋಗದ ಅಧಿಸೂಚನೆ ಸಮಸಂಖ್ಯೆ ದಿ:16-1-2014

***

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:31-3-2014 ಕ್ಕೆ ಅವಧಿ ಮುಗಿಯಲಿರುವ ಮಾಧ್ಯಮಿಕ ಸಹಕಾರ ಸಂಘಗಳು, ಫೆಡರಲ್ ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಸಂಬಂಧ ಉಲ್ಲೇಖಿತ ಅಧಿಸೂಚನೆಯಲ್ಲಿ ಸಹಕಾರ ಚುನಾವಣಾ ಆಯೋಗವು, ಚುನಾವಣೆ ನಡೆಸಬೇಕಾದ ಅವಧಿ/ದಿನಾಂಕಗಳನ್ನು ಗೊತ್ತುಪಡಿಸಿದೆ. ಅದರಂತೆ

| | | |
|---|---|---|
| 1 | ಎರಡನೇ ಹಂತದಲ್ಲಿ ಮಾಧ್ಯಮಿಕ ಸಹಕಾರ ಸಂಘಗಳು/ಸಹಕಾರಿಗಳಿಗೆ ಚುನಾವಣೆ ನಡೆಸುವಿಕೆ | ದಿನಾಂಕ:19.04.2014 ರಿಂದ 21.04.2014ರ ಅವಧಿಯಲ್ಲಿ ಜಿಲ್ಲಾ ಚುನಾವಣಾ ಅಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 2 | ಮೂರನೇ ಹಂತದಲ್ಲಿ ಫೆಡರಲ್ ಸಂಘಗಳಿಗೆ/ಒಕ್ಕೂಟ ಸಹಕಾರಿಗಳಿಗೆ ಚುನಾವಣೆ ನಡೆಸುವಿಕೆ | ದಿನಾಂಕ:24.05.2014 ರಿಂದ 26.05.2014 ಈ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |
| 3 | ನಾಲ್ಕನೇ ಹಂತದಲ್ಲಿ ಅಪೆಕ್ಸ್ ಸಂಘಗಳಿಗೆ ಚುನಾವಣೆ ನಡೆಸುವಿಕೆ | ದಿನಾಂಕ:28.06.2014 ರಿಂದ 30.06.2014ರ ಅವಧಿಯಲ್ಲಿ ಜಿಲ್ಲಾ ಚುನಾವಣಾಧಿಕಾರಿಗೆ ಸೂಕ್ತವೆನಿಸಿದ ಯಾವುದೇ ದಿನಾಂಕದಂದು ಚುನಾವಣೆ ನಡೆಸತಕ್ಕದ್ದಾಗಿದೆ. |

ಮೇಲ್ಕಂಡಂತೆ ಆಡಳಿತ ಮಂಡಲಿ ಚುನಾವಣೆಗಳನ್ನು ನಡೆಸುವ ಸಂಬಂಧ ಆಯೋಗವು ದಿನಾಂಕ:8-1-2014 ಮತ್ತು 13-2-2014 ರಂದು ಈಗಾಗಲೇ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿರುತ್ತದೆ. ಏಪ್ರಿಲ್ 2014 ರಲ್ಲಿ ನಿಗದಿಪಡಿಸಿರುವ ಮಾಧ್ಯಮಿಕ ಸಹಕಾರ ಸಂಘಗಳ ಮಂಡಲಿಗಳ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಸಂಬಂಧ ಆಯೋಗವು ಈಗಾಗಲೇ ರಿಟರ್ನಿಂಗ್ ಅಧಿಕಾರಿಗಳನ್ನು ನೇಮಿಸಿರುತ್ತದೆ ಮತ್ತು ಚುನಾವಣಾ ಪ್ರಕ್ರಿಯೆಯು ಪ್ರಾರಂಭಗೊಂಡಿರುತ್ತದೆ ಮತ್ತು ಆಯೋಗದ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೆ.

ಆಯೋಗದ ದಿನಾಂಕ:16-1-2014 ರ ಅಧಿಸೂಚನೆ ಸಂ:ಸಚುಆ/46/ಚುನಾವಣೆ/ಅಸೂ/2013-14 ಅನ್ನು ಪ್ರಶ್ನಿಸಿ, ಗೌರವ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ ರಿಟ್ ಅರ್ಜಿ ಸಂಖ್ಯೆ:6943/2014 (ಶ್ರೀ ರವಿರಾಜ್ ಹೆಗ್ಡೆ ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು) ದಾಖಲಾಗಿದ್ದು, ಸದರಿ ರಿಟ್ ಅರ್ಜಿಯು ವಿಚಾರಣಾ ಹಂತದಲ್ಲಿರುತ್ತದೆ. ಈ ರಿಟ್ ಅರ್ಜಿಯ ಸಂಬಂಧ ಗೌರವ ನ್ಯಾಯಾಲಯದ ಯಾವುದೇ ಮಧ್ಯಂತರ ಆದೇಶವಿರುವುದಿಲ್ಲ.

-2

ಈ ಮಧ್ಯೆ ಭಾರತ ಚುನಾವಣಾ ಆಯೋಗವು, 15 ನೇ ಲೋಕಸಭೆಯ ಅವಧಿಯು ದಿನಾಂಕ:31-5-2013 ಕ್ಕೆ ಮುಗಿಯಲಿರುವ ಹಿನ್ನೆಲೆಯಲ್ಲಿ ಹೊಸ ಲೋಕಸಭೆ ರಚನೆ ಸಂಬಂಧ ಲೋಕಸಭಾ ಚುನಾವಣಾ ದಿನಾಂಕವನ್ನು 17-4-2014 ಕ್ಕೆ ನಿಗದಿಪಡಿಸಿರುತ್ತದೆ ಮತ್ತು ಭಾರತ ಚುನಾವಣಾ ಆಯೋಗದ ನೀತಿ ಸಂಹಿತೆಯು ದಿನಾಂಕ:5-3-2014 ರಿಂದ ಜಾರಿಗೆ ಬಂದಿರುತ್ತದೆ. ಈ ನೀತಿ ಸಂಹಿತೆಯು ಕಾನೂನುಬದ್ಧವಾಗಿ ನಡೆಸಬೇಕಾದ ಸಹಕಾರ ಸಂಘಗಳ ಆಡಳಿತ ಮಂಡಲಿ/ಪದಾಧಿಕಾರಿಗಳ ಚುನಾವಣೆಗೆ ಅಡ್ಡಿಬರುವುದಿಲ್ಲ.

ಆದರೆ ಸಹಕಾರ ಚುನಾವಣಾ ಆಯೋಗವು ಮಾಧ್ಯಮಿಕ, ಫೆಡರಲ್ ಹಾಗೂ ಅಪೆಕ್ಸ್ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಸಂಬಂಧ ಮೇಲೆ ವಿವರಿಸಿರುವಂತೆ ಕ್ರಮವಾಗಿ 19-4-2014 ರಿಂದ 21-4-2014, 24-5-2014 ರಿಂದ 26-5-2014 ಹಾಗೂ 28-6-2014 ರಿಂದ 30-6-2014 ರ ಅವಧಿಯಲ್ಲಿ ನಡೆಸುವ ಬಗ್ಗೆ ಆಯೋಗವು ಅಧಿಸೂಚನೆ ಹೊರಡಿಸಿದ್ದು ಈಗಾಗಲೇ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸಿದ್ದು ಚುನಾವಣೆ ಪ್ರಕ್ರಿಯೆಯು ಪ್ರಾರಂಭವಾಗಿದೆ. ಅಂದರೆ 17-4-2014 ರಂದು ಲೋಕಸಭಾ ಚುನಾವಣೆ ಮುಗಿದ ನಂತರ 19-4-2014 ರಿಂದ 21-4-2014 ರ ಅವಧಿಯಲ್ಲಿ ಮಾಧ್ಯಮಿಕ ಸಹಕಾರ ಸಂಘಗಳ ಆಡಳಿತ ಚುನಾವಣೆಗಳು ನಡೆಸಲ್ಪಡುವುದರಿಂದ ಲೋಕಸಭಾ ಚುನಾವಣೆ ದಿನಾಂಕದೊಡನೆ, ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆಯು ಏಕಕಾಲಕ್ಕೆ ನಡೆಯುತ್ತಿಲ್ಲವಾದ ಕಾರಣ (No coincidence) ಸಹಕಾರ ಚುನಾವಣಾ ಆಯೋಗವು ಉಲ್ಲೇಖಿತ ದಿನಾಂಕ:16-1-2014 ರ ಅಧಿಸೂಚನೆಯಂತೆ ಹೊರಡಿಸಿರುವ ಚುನಾವಣಾ ಪ್ರಕ್ರಿಯೆಯು ಗೌರವ ಉಚ್ಚ ನ್ಯಾಯಾಲಯವು ಮೇಲ್ಕಂಡ ರಿಟ್ ಅರ್ಜಿ ಸಂಬಂಧ ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟು ಮುಂದುವರೆಯುತ್ತದೆ.

ಹೊಸದಾಗಿ ನೋಂದಣಿಯಾದ ಸಂಘಗಳು/ಮಂಡಲಿಗಳ/ಪದಾಧಿಕಾರಿಗಳ ಆಕಸ್ಮಿಕ ತೆರವಾದ ಮಂಡಲಿಯ ಖಾಲಿಸ್ಥಾನಗಳ ಚುನಾವಣೆ ನಡೆಸುವ ಸಂಬಂಧ ಚುನಾವಣೆ ನಡೆಸಬೇಕಾದ ಪ್ರಕರಣಗಳಲ್ಲಿ ಲೋಕಸಭಾ ಚುನಾವಣಾ ದಿನಾಂಕ ಮತ್ತು ಮತಎಣಿಕೆ ದಿನಾಂಕಗಳನ್ನು ಹೊರತುಪಡಿಸಿ ಉಳಿದ ಸೂಕ್ತ ದಿನಾಂಕಗಳಲ್ಲಿ ಮಂಡಲಿ/ಪದಾಧಿಕಾರಿಗಳ ಮತ್ತು ಖಾಲಿಬಿದ್ದ ಸ್ಥಾನಗಳಿಗೆ ಚುನಾವಣೆಗಳನ್ನು ನಡೆಸಬಹುದಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಹಕಾರ ಚುನಾವಣಾ ಆಯೋಗವು ಉಲ್ಲೇಖಿತ ಅಧಿಸೂಚನೆಯಂತೆ ಚುನಾವಣೆಗಳನ್ನು ನಡೆಸುವ ಪ್ರಕ್ರಿಯೆಗೆ ತಡೆಹಿಡಿಯುವ / ಮುಂದೂಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಚುನಾವಣೆ ಪ್ರಕ್ರಿಯೆಯು ಎಂದಿನಂತೆ ಮುಂದುವರೆಯುತ್ತದೆ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

(ಎನ್.ಸಿ. ಮುನಿಯಪ್ಪ)
**ಸಹಕಾರ ಚುನಾವಣಾ ಆಯುಕ್ತರು**

**ಇವರಿಗೆ:**

1) ಸಹಕಾರ ಸಂಘಗಳ ಜಂಟಿ ನಿಬಂಧಕರು, ______________ ಪ್ರಾಂತ, ______________
2) ______________ ಉಪನಿಬಂಧಕರು, ಎಲ್ಲಾ ಜಿಲ್ಲೆಗಳು
3) ______________ ಸಹಾಯಕ ನಿಬಂಧಕರು, ಎಲ್ಲಾ ಉಪವಿಭಾಗಗಳು

**ಪ್ರತಿಗಳು:**

1) ಸರ್ಕಾರದ ಕಾರ್ಯದರ್ಶಿಯವರು, ಸಹಕಾರ ಇಲಾಖೆ, ಬೆಂಗಳೂರು
2) ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿಆಸ್ಕರ್ ರಸ್ತೆ, ಬೆಂಗಳೂರು
3) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ/ ಮೈಸೂರು ವಿಭಾಗ
4) ಎಲ್ಲ ಜಿಲ್ಲೆಗಳ ಜಿಲ್ಲಾಧಿಕಾರಿಗಳು
5) ಸಂಬಂಧಿಸಿದ ಸಂಘಗಳಿಗೆ/ ರಾಜ್ಯ-ಜಿಲ್ಲಾ ಮಟ್ಟದ ಸಂಸ್ಥೆಗಳು
6) ಸುತ್ತೋಲೆ ಕಡತ/ರಕ್ಷಾ ಕಡತ